

ಬ್ಯಾಗಿಗೆ ಸೇರಿಸುತ್ತಾನೆ. ತನ್ನ ಗಾಜಿನ ಕೋಣೆಯಿಂದ ಈಚೆ ಬಂದರೆ ಶಾರ್ಪ್ ಶಾಲಿನಿ, ಅಂಕಲ್ ಲುಕ್‌ನ ಪರಮ್ ಶೆಟ್ಟಿ ಎದುರಾಗುತ್ತಾರೆ. ಅವರಿಗೆ ಎಲ್ಲಾ ವಿವರಿಸುತ್ತಾನೆ.

'ಓಕೆ. ಸಾರ್ ಬಾಸ್ ಎಲ್ಲಾ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದಾರೆ... ವಿಶ್ ಯು ಹ್ಯಾಪಿ ಜರ್ನಿ ಎಂದು ಕೈಕುಲುಕುತ್ತಾರೆ. ಬಾಸ್ ಸೂಚನೆಯಂತೆ ನಡೆಯೋದಲ್ಲ. ನನ್ನ ಸೂಚನೆ ಫಾಲೊ ಮಾಡಿ. ನಿಮ್ಮ ಬಾಸೇ ನನ್ನ ಸೂಚನೆ ಫಾಲೊ ಮಾಡುವಾಗ ನಿಮ್ಮದೇನು ಒಗ್ಗರಣೆ?' ಎಂದು ಸಿಡುಕುತ್ತಾ ನಾನು ಹೇಳಿದ್ದು ನೋಟ್ಸ್ ಮಾಡ್ಕೊಳ್ಳಿ ಎಂದು ಮನೆಗೆ ಹೊರಟಿದ್ದ ಅವರನ್ನು ಪುನಃ ತನ್ನ ಚೇಂಬರಿಗೆ ಕರೆದೊಯ್ಯುತ್ತಾನೆ. ತಾನು ಕ್ಯಾಲಿಫೋರ್ನಿಯಾಕ್ಕೆ ಹೊರಟಿದ್ದು ವಾರದೊಳಗೆ ಬರುವುದಾಗಿ ಹೇಳಿದ್ದನ್ನೇ ಹೇಳುತ್ತಾ ಇವನು ತನ್ನ ಆಬ್ಸೆನ್ಸ್‌ನಲ್ಲಿ ಮಾಡಬೇಕಾದ ಕೆಲಸಗಳನ್ನು ಪಟ್ಟಿ ಮಾಡಿಸಿಯೇ ಅವರಿಗೆ ಬಿಡುಗಡೆಯ ಭಾಗ್ಯ ಕರುಣಿಸುವನು.

ಮನೆಗೆ ಬಂದ ಗಿರೀಶ ಹೆಂಡತಿಗೆ ತಾನೂ ಟೂರ್ ಹೊರಟಿರುವುದಾಗಿಯೂ, ವಾರದೊಳಗೆ ಬರುವುದಾಗಿ ಹೇಳಿದಾಗ ಭಾಗ್ಯ ಸಿಡಿಮಿಡಿಗೊಳ್ಳುತ್ತಾಳೆ. ಮೊದಲೆಲ್ಲಾ ಫಾರಿನ್ ಟೂರಾ ಎಂದು ಬಾಯಿ ಬಾಯಿ ಬಿಡುತ್ತಿದ್ದು ಹೆಮ್ಮೆಪಡುತ್ತಿದ್ದ ಅವಳೀಗ ಮಂಕಾಗುತ್ತಾಳೆ. ಏಕೆಂದರೆ ವಾರವೆಂದು ಹೊರಟವರು ತಿಂಗಳಾದರೂ ಬಾರದ್ದೂ ಉಂಟು. ನೀವು ಕಂಪನಿ ಅಂತ ಕಂಪನಿನಾ ಉದ್ಧಾರ ಮಾಡಿದ್ದೇ ಆಗೋಯ್ತು. ಹೆಂಡ್ತಿ ಮಕ್ಕಳಿಗೆ ಕಂಪನಿ ಕೊಟ್ಟು ಎಷ್ಟು ವರ್ಷವಾಯ್ತು? ನೆನಪು ಮಾಡ್ಕೊಳ್ಳಿ. ಮಕ್ಕಳು ಯಾವ ಯಾವ ಕ್ಲಾಸಲ್ಲಿ ಓದ್ತಾ ಇವೆ. ಅವುಗಳ ಅಗತ್ಯವೇನೆಂದು ಎಂದಾದ್ರೂ ಯೋಚಿಸಿದ್ದುಂಟಾ ನೀವು? ಮಕ್ಕಳಿಗೆ ಯಾವತ್ತಾರ ಹೋಮ್‌ವರ್ಕ್ ಮಾಡಿದ್ದುಂಟಾ? ಒಂದು ದಿನವಾದ್ರು ನಿಮ್ಮ ಕಾರಲ್ಲಿ ಅವುಗಳನ್ನು ಡ್ರಾಪ್ ಮಾಡಿದ್ದು ನೆನಪುಂಟಾ? ಅಟ್ ಲೀಸ್ಟ್ ಒಂದು ದಿನವಾದ್ರೂ ಅವಕ್ಕೆ ಯೂನಿಫಾರ್ಮ್ ತೊಡಿಸಿ ಶೂಸ್ ಹಾಕಿದ್ದುಂಟಾ? ಅವಳ ಪ್ರಶ್ನೆಗಳಿಗೆ ಕೊನೆಯೇ ಇಲ್ಲವೆಂದವನಿಗೆ ಗೊತ್ತು. ಹೀಗಾಗಿ ಕೋಪ ಮಾಡಿಕೊಳ್ಳದೆ ಸಹಿಸಿಕೊಳ್ಳುತ್ತಾನೆ. ಹಗಲು ರಾತ್ರಿ ತಾನು ದುಡಿಯುತ್ತಿರುವುದಾದರೂ ಯಾರಿಗಾಗಿ ಎಂಬ ಹಮ್ಮು ಅವನದ್ದು. ಕೇವಲ ಹದಿನೈದು ಸಾವಿರ ಸಂಬಳಕ್ಕಾಗಿ ಖಾಸಗಿ ಹೈಸ್ಕೂಲಲ್ಲಿ ಮ್ಯಾಥ್ಸ್ ಹೇಳಿಕೊಡುವ ಭಾಗ್ಯಳಿಗೆ ಲೈಫ್‌ಮ್ಯಾಥ್ಸ್ ಎಷ್ಟು ಹಾರಿಬಲ್ ಅಂತ ಗೊತ್ತಿಲ್ಲವೆಂದು ನಿಟ್ಟುಸಿರು ಬಿಡುತ್ತಾನೆ.

ಅವಳ ದುಡಿಮೆ ತನ್ನ ಒಂದು ದಿನದ ಪಾರ್ಟಿ ಖರ್ಚಿಗೂ ಸಮವಲ್ಲ. ಕಂಪನಿಗಳ ಲೈಫ್‌ಸ್ಟೈಲೇ ಬೇರೆ, ಅಪೋಸಿಟ್ ಕಂಪನಿಗಳ ನೆಟ್‌ವರ್ಕ್ ತಿಳಿಯಲು ಚಾಣಾಕ್ಷತನವೇ ಇರಬೇಕು. ಬಾಸ್‌ಗೆ ಇಂತಹ ಸೂಕ್ಷ್ಮಗಳೆಲ್ಲಾ ಅರ್ಥವೇ ಆಗೋದಿಲ್ಲ. ಬಾಸ್‌ಗಳೇ ಇಷ್ಟು ತಲೆ ಹಿಡಿದು ಗೊತ್ತು, ತಲೆ ಓಡಿಸಿ ಹೂಂ ಹುಂ...' ಭಾಗ್ಯ ಇನ್ನಷ್ಟು ಜೋರಾಗಿ ಕೂಗಾಡುವಾಗ ಇಹಕ್ಕೆ ಬರುತ್ತಾನೆ. ನಾನೂ ಒಳಗೂ ಹೊರಗೂ ಎಷ್ಟು ಅಂತ ದುಡೀಲಿ ಎಂದವಳು ರೇಗುವಾಗ ಇವನೂ ಗದರುತ್ತಾನೆ. ನಿನಗೆ ಯಾವನು ಕೆಲಸಕ್ಕೆ ಹೋಗು ಅಂತ ಹೇಳಿದ ಮುತ್ತಾಳೆ? ನಿನ್ನ ಸ್ಯಾಲರಿಯಿಂದೇನಾದೀತು? ಎಂದವನಂದಾಗ ಇವಳು ಒಮ್ಮೆಲೆ ವುಮೆನ್‌ಲಿಬ್ ಬಗ್ಗೆ ಭಾಷಣ ಬಿಗಿಯಲು ಶುರುವಿಟ್ಟುಕೊಳ್ಳುತ್ತಾಳೆ. ಅವಳ ಚೀರಾಟ ಹೆಚ್ಚಿದಾಗಲೆಲ್ಲಾ ಅವನು ಮಾಡುವುದಿಷ್ಟೆ. ಮಕ್ಕಳ ಮುಂದೆಯೇ ಗಟ್ಟಿಯಾಗಿ ಅವಳನ್ನು ತಬ್ಬಿ ಮುತ್ತಿಟ್ಟು ಉಸಿರುಗಟ್ಟಿಸಿಬಿಡುತ್ತಾನೆ. ಅಲ್ಲಿಗೆ ಯುದ್ಧವಿರಾಮ. ಇವತ್ತೂ ಲಿಪ್ ಲಾಕ್ ಆದ ಮೇಲೆಯೇ ಅವಳು ಪ್ರಸನ್ನವದನೆಯಾಗಿ ಅವನ ಸೂಟ್‌ಕೇಸ್‌ಗೆ ಬೇಕಾದ ಬಟ್ಟೆ ಬರೆ, ಕೊಂಡೊಯ್ಯಬೇಕಾದ ಆಫೀಸ್ ಫೈಲುಗಳನ್ನು ಹುಷಾರಾಗಿ ಎತ್ತಿಟ್ಟು ನಗೆ ತುಳುಕಿಸುತ್ತಾಳೆ.

ಶಿಷ್ಟಾಚಾರಗಳನ್ನೆಲ್ಲ ಮುಗಿಸಿ ವಿಮಾನ ಏರಿ ತನ್ನ ಜಾಗದಲ್ಲಿ ಕೂತ ಇವನು ಲ್ಯಾಪ್‌ಟ್ಯಾಪ್ ತೆರೆದು ತಲ್ಲೀನ. ವಿಮಾನ ನಿಲ್ದಾಣದಿಂದ ಹೊರಬಿದ್ದಾಗ ಏಜೆನ್ಸಿಯಿಂದ ಸ್ವಾಗತ. ನಿಗದಿಪಡಿಸಿದ ಲಾಡ್ಜಿಂಗ್‌ನಲ್ಲಿ ವಾಸ್ತವ್ಯ ಮರುದಿನ ಪ್ರಾಜೆಕ್ಟ್ ಕುರಿತು ವಿವರಣೆ, ಪ್ರಾತ್ಯಕ್ಷಿಕೆ, ಟ್ಯಾಲೆಂಟ್ ಎಕ್ಸಿಬಿಷನ್‌ನಂತೆ ಡಿಬೇಟ್‌ಗಳೂ ಸಾಗುತ್ತವೆ. ವಾರವೆಂದು ನಿಗದಿಯಾದ ಟೂರ್ ಮೂರು ವಾರ ಎಳೆದರೂ ಕೋಟಿಗಟ್ಟಲೆ ಪ್ರಾಜೆಕ್ಟ್ ಒಪ್ಪಿಸುವ ಕೆಲಸ ಯಶಸ್ವಿಯಾಗಿ ಮುಗಿಸಿದ್ದರಿಂದ ಮನಸ್ಸು ನಿರಾಳ. ಬಾಸ್ ಅಭಿನಂದಿಸಿ ಇಮೇಲ್ ಮಾಡಿದ್ದ ಇವನು ಗರಿಗೆದರಲು ಅಷ್ಟು ಸಾಕು. ಇನ್ನೂ ಕೆಲವೇ ವರ್ಷಗಳಲ್ಲಿ ಸಿಟಿಯಲ್ಲಿರುವ ಕೆಲವೇ ಪ್ರಸಿದ್ಧ ಐಟಿಬಿಟಿ ಕಂಪನಿಗಳಲ್ಲಿ ತನ್ನದೂ ಒಂದು. ತಟ್ಟನೆ ತಿದ್ದಿಕೊಂಡ, ತಮ್ಮದೂ ಒಂದು ಎಂದು ನಿಡುಸುಯ್ದ. ಕಾಮ್ ಕಿಸಿಕಾ ನಾಮ್ ಕಿಸಿಕಾ ಎಂದೊಳಗೇ ಉರಿಸಿಕೊಂಡ. ಕ್ಯಾಲಿಫೋರ್ನಿಯಾದಿಂದ ಬಂದಾಗ ಕಂಪನಿ ಮ್ಯಾನೇಜ್‌ಮೆಂಟ್‌ನವರಿಂದ ಭವ್ಯ ಸ್ವಾಗತ. ಭರ್ಜರಿ ಡಿನ್ನರ್ ಪಾರ್ಟಿ ಇಂತಹ ಪಾರ್ಟಿಗಳಿಗೆಲ್ಲಾ ಭಾಗ್ಯಳನ್ನು ಕರೆತಂದು ತನ್ನ ಲೆವೆಲ್ ತೋರಬೇಕೆಂಬಾಸೆ ಇವನದ್ದು. ಅವಳ ಮಿಡ್ಲ್ ಕ್ಲಾಸ್ ಮೈಂಡ್ ಇಂತದ್ದಕ್ಕೆಲ್ಲಾ ಬೆರಗಾಗದಷ್ಟು ಜಡ್ಡು ಎಂದವನಿಗೆ ಎಂದೋ ಗೊತ್ತಾಗಿದೆ. ಬಂದರೂ ಖುಷಿಪಡುವ ಜಾಗದಲ್ಲಿ ಅವಳದ್ದು ಕಿರಿಕಿರಿ. ಅವಳ ಖುಷಿಯೇ ಬೇರೆ ಟೊಮ್ಯಾಟೊ ಬೆಲೆ ಕಡಿಮೆಯಾದರೆ ಅವಳಿಗಾಗುವ ಆನಂದಕ್ಕೂ ಗಿರೀಶನ ಕೋಟಿ ಪ್ರಾಜೆಕ್ಟ್ ಸಮವಾಗಲಾರದೇನೋ.

***

ಇತ್ತೀಚೆಗೆ ಗಿರೀಶ ಬಹಳಷ್ಟು ಬದಲಾಗಿದ್ದಾನೆ. ಚಿನ್ನದ ಮೊಟ್ಟೆ ಇಡುವ ಕೋಳಿ ಬೇರೆಲ್ಲಾದರೂ ಹಾರಿದರೆ ಎಂಬ ಅನುಮಾನ ವಿಲಿಯಂನಲ್ಲಿ ಉಂಟಾಗಿದೆ. ಅವನಿಗೆಂಥದ್ದಾದರೂ ಸರಿ ಪ್ರೊಮೋಷನ್ ಕೊಟ್ಟು ಸ್ಯಾಲರಿ ಏರಿಸಿ ಕಟ್ಟಿ ಹಾಕಬೇಕೆಂದು ಆಲೋಚಿಸುತ್ತಾನೆ. ತನ್ನ ಚೇಂಬರ್‌ಗೆ ಬರಮಾಡಿಕೊಂಡು ನಗುತ್ತಾ ಪ್ರೊಮೋಷನ್ ಕೊಡುವ ಬಗ್ಗೆ ಮಾತನಾಡುತ್ತಾ ಗಿರೀಶನ ಮೋರೆಯಲ್ಲಿ ಮಿಂಚು ಮಾಡುವುದನ್ನು ನೋಡಲು ತವಕಿಸುತ್ತಾನೆ. ಮಿಂಚಿರಲಿ ಮೋರೆಯಲ್ಲಿ ಒಂದು ಸಣ್ಣ ನಗುವೂ ಮೂಡದಿರುವುದನ್ನು ನೋಡಿ ಗಾಸಿಗೊಳಗಾಗುವ ವಿಲಿಯಂ, 'ವಾಟ್ ಡು ಯು ಸೇ ಗಿರೀಶ್ ಸರ್?' ಅಂತ ಪುಸಲಾಯಿಸಿದ. 'ಸಾರಿ ಬಾಸ್, ನನಗೆ ಹೆಚ್ಚಿನ ಜವಾಬ್ದಾರಿಗಳು ಬೇಡ. ನನಗಿಂತ ಸ್ಕಾಲರ್‌ಗಳಿದ್ದಾರಲ್ಲ